

ಭಾರತದ ಸಂವಿಧಾನ

ಪೀಠಿಕೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.




# ಸಂವಿಧಾನದ ಸದಾಶಯ

■ ಶ್ಯಾಮರಾಜ್ ಪಟ್ರಮೆ

ನಾವೆಲ್ಲಾ ಎಂದೆಂದೂ ಭಾರತದಾ ಜನತೆ
ನಮ್ಮಿಂದಾಗಿ ಎತ್ತರಕೇರಲಿ ಸಂವಿಧಾನದ ಘನತೆ|

ಸಾರ್ವಭೌಮತೆಯ ದೇಶವನಾಗಿ
ಪ್ರಜಾಪ್ರಭುತ್ವದ ಭಾರತವಾಗಿ|
ಧರ್ಮಗಳಿಗೆ ನಿರಪೇಕ್ಷತೆಯಾಗಿ
ಕಟ್ಟುವೆವೂ ಗಣರಾಜ್ಯವನಾಗೀ ||ನಾವೆಲ್ಲ||

ವೈವಿಧ್ಯತೆಯೊಳು ಏಕತೆಯಲ್ಲೀ
ಸಹೋದರತ್ವದಿ ಐಕ್ಯತೆಯಲ್ಲೀ|
ಸಮಾಜವಾದದ ಬೆಳಕಿನಲ್ಲೀ
ಕಟ್ಟುವೆವೂ ದೃಢ ದೇಶವನಾಗೀ ||ನಾವೆಲ್ಲ||

ಸಾಮಾಜಿಕ ಆರ್ಥಿಕ ರಾಜಕೀಯದೀ
ನ್ಯಾಯವು ಸರ್ವರಿಗೂ ಸಿಗಲೂ|
ನಂಬಿಕೆ ಶ್ರದ್ಧೆ ಅಭಿವ್ಯಕ್ತಿಗಳಲಿ
ಸ್ವತಂತ್ರ ಸರ್ವರಿಗೂ ಇರಲೂ ||ನಾವೆಲ್ಲ||

ಸ್ಥಾನಮಾನದಲಿ ಅವಕಾಶಗಳಲೀ
ಸಮತೆಯು ಎಲ್ಲರಿಗೂ ಇರಲೂ|
ದೇಶದ ಏಕತೆ ಸಮಗ್ರತೆ ಕಾಯುತ
ವ್ಯಕ್ತಿ ಗೌರವ ಸೌಹಾರ್ದತೆ ಇರಲೂ ||ನಾವೆಲ್ಲ||

ಸಂವಿಧಾನ ನಮಗೇ ನಾವೇ ಅರ್ಪಿಸಿಕೊಂಡಿಹೆವೂ
ಶಾಸನವಾಗಿ ಅಂಗೀಕರಿಸೀ ಪ್ರತಿಜ್ಞೆಗೈಯುವೆವೂ ||ನಾವೆಲ್ಲ||



# ಕುಂಚ ಪ್ರಪಂಚ

**ಚಿನ್ಮಯ್**, 5ನೇ ತರಗತಿ, ಕಾರ್ಮೆಲ್ ಸ್ಕೂಲ್, ಪದ್ಮನಾಭನಗರ, ಬೆಂಗಳೂರು








**ಅದಿತಿ ಎಂ. ಕೃಷ್ಣ**
8ನೇ ತರಗತಿ
ಶ್ರೀ ಕುಮಾರನ್ ಚಿಲ್ಡ್ರನ್ಸ್ ಅಕಾಡೆಮಿ, ಬೆಂಗಳೂರು

ಸುಧಾ ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ-ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ-ರೇಖಾಚಿತ್ರಗಳನ್ನು ಕಳುಹಿಸಬಹುದು.
ಇ ಮೇಲ್:
editorsu@sudha.co.in